**ಎಂ.ವಿ.ಸಿ. ನಂಃ02/2022, P.W.-1**

ದಿನಾಂಕಃ18.01.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆ ಃ** ಅರ್ಜಿದಾರರ ಪರ **ವಕೀಲರಿಂದಃ**

ನಾನು out patient ಕಾರ್ಡ್ ಗಳು, ಡಿಸ್ಚಾರ್ಜ್ ಸಮ್ಮರಿ ಮತ್ತು ರಿಪೋರ್ಟ್ ಹಾಜರುಪಡಿಸಿದ್ದು ಅವುಗಳಲ್ಲಿ ಡಿಸ್ಚಾರ್ಜ್ ಸಮ್ಮರಿ ಜೆರಾಕ್ಸ್ ಪ್ರತಿಗಳಾಗಿದ್ದು , ರಿಪೋರ್ಟ್‌ನಲ್ಲಿ ಪರೀಕ್ಷಿಸಿದವರ ಸಹಿ ಇಲ್ಲದಿರುವ ಕಾರಣ ಸದರಿ ದಾಖಲೆಗಳನ್ನು ನಿಶಾನಿಸಲಾಗಿರುವುದಿಲ್ಲ.

out patient ಕಾರ್ಡ್ ಗಳನ್ನು ನಿಪಿ -6 ಮತ್ತು 7 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

1. ಪಾಟೀ ಸವಾಲು ಃ 2 ನೇ ಎದುರುದಾರರ ಪರಃ ಶ್ರೀ ಯು ಎಸ್ ಎನ್ ವಕೀಲರಿಂದಃ

ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ನನ್ನ ವಿರುದ್ಧ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತವಾಗಿರುವ ಕಾರಣ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ 2-3 ದಿನಗಳ ಕಾಲ ಚಿಕಿತ್ಸೆ ಪಡೆದಿದ್ದೇನೆ. ಅಪಘಾತದಿಂದ ನನ್ನ ಕಣ್ಣಿನ ರೆಪ್ಪೆಗಳು ಹಾಗೂ ಮುಖದ ದವಡೆಗಳಿಗೆ ಪೆಟ್ಟಾಗಿತ್ತು. ಅಪಘಾತವಾದ ಸಮಯದಲ್ಲಿ ನಾನು ನನ್ನ ಹೆಂಡತಿಯ ಮಾಲೀಕತ್ವದ ಓಮ್ನಿ ಕಾರಿನಲ್ಲಿ ಬರುತ್ತಿದ್ದೆನು. ಓಮ್ನಿ ಕಾರನ್ನು ಚಲಾಯಿಸಲು ನನಗೆ ಡಿಎಲ್ ಇರಲಿಲ್ಲ ಎಂದಂರೆ ಸರಿಯಲ್ಲ. ಅಪಘಾತದಿಂದಾಗಿ ನನಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ ಅದಕ್ಕೆ

**ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದಾಗಿ ಬೈಕ್ ನ ಚಾಲಕ ಮೃತಪಟ್ಟಿದ್ದಾನೆಂದರೆ ಸರಿ.**

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು